**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು**

ಸಿ ಸಿ ನಂ 1187/2021

| | | | |
|---|---|---|---|
| ಹೆಸರು | – | ರಾಘವೇಂದ್ರ ಕೆ ಆರ್ | CW–15<br>PW–8 |
| ತಂದೆ ಹೆಸರು | – | ರುದ್ರಪ್ಪ ಕೆ | |
| ವಯಸ್ಸು | – | 43 ವರ್ಷ | |
| ಉದ್ಯೋಗ | – | ಸಿ ಪಿ ಐ ಶಿರಾ ಗ್ರಾಮಾಂತರ ಠಾಣೆ | |
| ವಾಸಸ್ಥಳ | – | ಶಿರಾ ಟೌನ್ | |

ದಿನಾಂಕಃ26.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು ದಿಃ09.03.2020 ರಿಂದ 16.09.2021 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 25.10.2021 ರಂದು ಈ ಪ್ರಕರಣದ ಕಡತವನ್ನು ಚಾಸಾ.13 ರವರಿಂದ ಪಡೆದುಕೊಂಡಿದ್ದೇನೆ. ಅದೇ ದಿನ ಚಾಸಾ.2 ರವರ ಹೇಳಿಕೆ ಮತ್ತು ಚಾಸಾ.3 ರವ ಮರು ಹೇಳಿಕೆ ಪಡೆದಿದ್ದೇನೆ. ದಿಃ02.12.2020 ರಂದು ಚಾಸಾ.11 ರವರಿದ ಮೃತ ಜಂಗಲಿ ಈರಣ್ಣನವರು ಪಿ ಎಂ ವರದಿ ಪಡೆದಿದ್ದೇನೆ. ಪಿ ಎಂ ವರದಿಯನ್ನುನಿಪಿ–16 ಎಂದು ಸಹಿಯನ್ನುನಿಪಿ–16(ಎ) ಎಂದು ಗುರುತಿಸಲಾಯಿತು.

ದಿಃ04.01.2021 ರಂದು ಚಾಸಾ.10 ರವರಿಂದ ಐ ಎಂ ವಿ ವರದಿ ಪಡೆದಿದ್ದೇನೆ. ಐ ಎಂ ವಿ ವರದಿಯನ್ನು ನಿಪಿ–17 ಎಂದು ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು. ದಿಃ22.01.2021 ರಂದು ಆರ್ ಸಿ ಮಾಲಿಕರಾದ ಚಾಸಾ.9 ರವರಿಗೆ ಕಲಂ 133 ರಂತೆ ನೋಟೀಸ್ ಜಾರಿ ಮಾಡಿ ಉತ್ತರ ಪಡೆದಿದ್ದೇನೆ. ನೋಟೀಸನ್ನು ನಿಪಿ–18 ಎಂದು ಸಹಿಯನ್ನು ನಿಪಿ–18(ಎ) ಎಂದು ಉತ್ತರವನ್ನು ನಿಪಿ–19 ಎಂದು ಸಹಿಯನ್ನು ನಿಪಿ–19(ಎ) ಎಂದು, ಇಂಡಮ್ನಿಟಿಬಾಂಡನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ನಿಪಿ–20 ಎಂದು ಸಹಿಯನ್ನು ನಿಪಿ–20(ಎ) ಎಂದು ಗುರುತಿಸಲಾಯಿತು. ಸದರಿ ವಾಹನವನ್ನು ಆರೋಪಿ ಚಾಲನೆ ಮಾಡುತ್ತಿದ್ದಾರೆಂದು ಉತ್ತರದಲ್ಲಿ

ತಿಳಿಸಿರುತ್ತಾರೆ. ಆರೋಪಿ ಈ ದಿನ ಗೈರು ಹಾಜರಿದ್ದು ಅವರ ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಟಿ ಎಸ್ ವಕೀಲರಿಂದಃ**

ದಿಃ 25.10.2021 ರಂದು ಈ ಪ್ರಕರಣದ ಕಡತವನ್ನು ಚಾಸಾ.13 ರವರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ.2 ರವರ ಹೇಳಿಕೆ ಮತ್ತು ಚಾಸಾ.3 ರವ ರ ಮರು ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ02.12.2020 ರಂದು ಚಾಸಾ.11 ರವರಿದ ಮೃತ ಜಂಗಲಿ ಈರಣ್ಣನವರು ಪಿ ಎಂ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ04.01.2021 ರಂದು ಚಾಸಾ.10 ರವರಿಂದ ಐ ಎಂ ವಿ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ22.01.2021 ರಂದು ಆರ್ ಸಿ ಮಾಲಿಕರಾದ ಚಾಸಾ.9 ರವರಿಗೆ ಕಲಂ 133 ರಂತೆ ನೋಟೀಸ್ ನೀಡಿಲ್ಲ ಅವರಿಂದ ಉತ್ತರ ಪಡೆದಿಲ್ಲ ಎಂದರೆ ಸರಿಯಲ್ಲ. ಇಂಡಮ್ನಿಟಿ ಬಾಂಡನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಆರೋಪಿ ಚಾಲನೆ ಮಾಡುತ್ತಿದ್ದರು ಎಂದು ಉತ್ತರದಲ್ಲಿ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆ ಸರಿಯಾಗಿ ಮಾಡದೇ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು